**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಸಿಸಿ ನಂ 10/2018**

ಸಿ.ಡಬ್ಲೂಃ **1** ಪಿಡಬ್ಲೂ **1**

| | |
|---|---|
| ಸಾಕ್ಷಿದಾರರ ಹೆಸರು | ನಂಜುಂಡಪ್ಪ |
| ತಂದೆಯ ಹೆಸರು | ಶಿವಣ್ಣ |
| ವಯಸ್ಸು | ಸುಮಾರು 50 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ ಸ್ಥಳ | ಚಿಕ್ಕಬೆಳವಂಗಲ ಗ್ರಾಮ |

**ದಿನಾಂಕಃ 25.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಅಭಿಯೋಜಕ **ರವರಿಂದ**

ಆರೋಪಿತ ಗೊತ್ತು. ನಮ್ಮ ಪಕ್ಕದ ಮನೆಯವರು. ಚಾಸಾ-2 ರಿಂದ 8 ರವರು ಗೊತ್ತು. ದಿಃ 04.03.2017 ರಂದು ಶನಿವಾರ ರಾತ್ರಿ 9-45 ಗಂಟೆ ಸಮಯದಲ್ಲಿ ಒಂದು ಭಯಂಕರವಾದ ಸ್ಫೋಟದ ಶಬ್ಧ ಪಕ್ಕದ ಮನೆಯಿಂದ ಕೇಳಿಬಂದು ಏನಾಗಿದೆ ಎಂದು ಹೊರಗಡೆ ಬಂದು ನೋಡಿದಾಗ ಆರೋಪಿ ಹಾಗೂ ಅವರ ತಂದೆ ಅಲ್ಲಿದ್ದರು. ಆ ಸ್ಫೋಟದಿಂದ ಆರೋಪಿ ಹಾಗೂ ನಮ್ಮ ಮನೆಗೆ ಹಾಗೂ ಅಕ್ಕಪಕ್ಕದ ಮನೆಗಳಿಗೂ ಸಹ ಬಿರುಕು ಉಂಟಾಗಿರುತ್ತದೆ. ಸ್ಫೋಟಕ್ಕೆ ಸಂಬಂಧಿಸಿದಂತೆ ಆರೋಪಿಯನ್ನು ಕೇಳಲು ಹೋದಾಗ ಅವರು ಅವರಿಗೆ ಗೊತ್ತಿಲ್ಲದ ರೀತಿಯಲ್ಲಿ ಮಾತನಾಡಿದರು. ಆರೋಪಿ ಒಂದು ಶಾಮಿಯಾನ ಅಂಗಡಿಯನ್ನು ನಡೆಸುತ್ತಿದ್ದು, ಅದರಲ್ಲಿ ಕಮರ್ಷಿಯಲ್ ಗ್ಯಾಸ್ ಸಿಲಿಂಡರ್‌ಗಳನ್ನು ಬಳಸುತ್ತಿದ್ದು, ಅಂತಹ 7-8 ಸಿಲಿಂಡರ್‌ಗಳನ್ನು ಅವರು ತಮ್ಮ ಮನೆಗೆ ತಂದಿಟ್ಟುಕೊಂಡಿದ್ದು, ಅವುಗಳನ್ನು ಅವರು ರೀ ಫಿಲ್ ಮಾಡುತ್ತಿದ್ದರು ಆ ಕಾರಣದಿಂದಲೇ ಸ್ಫೋಟ ಸಂಭವಿಸಿದೆ ಎಂಬ ಸಂಶಯದಿಂದ ಪೋಲೀಸ್ ಠಾಣೆಗೆ ದೂರನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ದೂರನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದಿಃ 05.03.2017 ರಂದು ಬೆಳಿಗ್ಗೆ 11-00 ರಿಂದ 11-30 ಗಂಟೆ ಸಮಯದಲ್ಲಿ ಮಹಜರ್ ಕ್ರಮ ಜರುಗಿಸಲು ಪೋಲೀಸರು ಬಂದಿರುತ್ತಾರೆ. ಮಹಜರ್ ಜರುಗಿಸುವ ಸಮಯದಲ್ಲಿ ನಾನು ಹಾಗೂ ಚಾಸಾ-7 ಮತ್ತು 8 ರವರು ಹಾಜರಿದ್ದರು. ಸಾಕ್ಷಿಗೆ ಒಂದು ಪಂಚನಾಮೆಯನ್ನು ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ಒಂದು ಕಲ್ಲನ್ನು ಪೋಲೀಸರು ನಮಗೆ ತೋರಿಸಿದ್ದು, ಅದನ್ನು ಅಮಾನತ್ತುಪಡಿಸಿಕೊಂಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಮಹಜರ್ ಮಾಡುವ ಸಮಯದಲ್ಲಿ ಛಾಯಾಚಿತ್ರಗಳನ್ನು ಹಾಗೂ ಮಹಜರ್ ಪ್ರಕ್ರಿಯೆಯನ್ನು ವೀಡಿಯೋ ಚಿತ್ರೀಕರಣ ಸಹ ಮಾಡಿರುತ್ತಾರೆ. ಸಾಕ್ಷಿಯು 3 ಛಾಯಾಚಿತ್ರಗಳನ್ನು ಅವರೇ ತೆಗೆದು ಪೋಲೀಸರಿಗೆ ನೀಡಿರುತ್ತಾರೆಂದು ನುಡಿಯುತ್ತಾರೆ. ಸದರಿ ಛಾಯಾಚಿತ್ರಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-3 ರಿಂದ 5 ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ಯಾವುದೇ ಸಿಲಿಂಡರ್‌ಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ನಿಪಿ-5 ನ್ನು ಆರೋಪಿಯು ರಾತ್ರಿ ಸಿಲಿಂಡರ್ ಗಳನ್ನು ಸಾಗಿಸುವ ಸಮಯದಲ್ಲಿ ತೆಗೆದಿರುತ್ತೇನೆ ಎಂದು ನುಡಿಯುತ್ತಾರೆ. ಸ್ಫೋಟದಿಂದ ನನಗೆ ಸುಮಾರು ರೂ. 6 ಲಕ್ಷ ದಷ್ಟು ನಷ್ಟ ಉಂಟಾಗಿರುತ್ತದೆ.

**ಮಾನ್ಯ ಸ. ಸ. ಅ. ಸಾಕ್ಷಿಯನ್ನು** ಭಾಗಶಃ **ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟಿಸವಾಲಿಗೆ ಅನುಮತಿ ಕೋರಲಾಗಿ, ನೀಡಲಾಯಿತು.**

**ಪಾಟೀಸವಾಲುಃ ಮಾನ್ಯ** ಮಾನ್ಯ ಸ.ಸ. ಅಭಿಯೋಜಕ

ಮಹಜರ್ ಸಮಯದಲ್ಲಿ ಅರ್ಧ ಗ್ಯಾಸ್ ಸಿಲಿಂಡರ್, ಭಾರತ್ ಕಂಪೆನಿಯ ತುಂಬಿದ ಮೂರು ಗ್ಯಾಸ್ ಸಿಲಿಂಡರ್‌ಗಳು ಮತ್ತು ಎ.ಎಸ್.ಐ.ಎ ಎಲ್.ಪಿ.ಜಿ ಖಾಲಿ ಸಿಲಿಂಡರ್ ಹಾಗೂ ಒಂದು ಖಾಲಿ ಕಮರ್ಷಿಯಲ್ ಸಿಲಿಂಡರ್‌ಗಳನ್ನು ಮಹಜರ್ ಜರುಗಿಸುವ ಸಮಯದಲ್ಲಿ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಹಾಗೂ ಮಹಜರ್ ಜರುಗಿಸುವ

ಸಮಯದಲ್ಲಿ ಘಟನಾ ಸ್ಥಳದಲ್ಲಿ ಎರಡು ಹಿಡಿ ಗಾತ್ರದ ಕಲ್ಲುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

ಸಾಕ್ಷಿಯು ಮುಂದುವರೆದು ನನ್ನ ಸಮಕ್ಷಮದಲ್ಲಿ ಯಾವುದೇ ಸಿವಿಲಿಂಡರ್‌ಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಘಟನೆ ನಡೆದ ರಾತ್ರಿ ಘಟನಾ ಸ್ಥಳಕ್ಕೆ ಪೋಲೀಸರು ಸುಮಾರು ರಾತ್ರಿ 12-00 ರಿಂದ 1-00 ಗಂಟೆ ಸಮಯಕ್ಕೆ ಬಂದಿರುತ್ತಾರೆ. ರಾತ್ರಿ ವೇಳೆ ಪೋಲೀಸರು ಮಹಜರ್ ಜರುಗಿಸಲು ಆಗುವುದಿಲ್ಲ ಬೆಳಿಗ್ಗೆ ಬಂದು ಜರುಗಿಸುತ್ತೇವೆ ಎಂದು ಹೇಳಿರುತ್ತಾರೆ. ನಾನು ನಮ್ಮ ಮನೆಯಲ್ಲಿದ್ದು, ರಾತ್ರಿ 3-00 ಗಂಟೆ ಸಮಯದಲ್ಲಿ ಶಬ್ಧ ಕೇಳಿಸಿದ್ದು, ನಾನು ಹೊರಗಡೆ ಬಂದು ನೋಡಿದಾಗ ಸಿಲಿಂಡರ್‌ಗಳನ್ನು ಬೇರೆ ಕಡೆ ಸಾಗಿಸಲು ಪ್ರಯತ್ನಿಸುತ್ತಿದ್ದರು. ಆ ಸಮಯದಲ್ಲಿ ನಾನು ಪೋಲೀಸ್ ಇಲಾಖೆಗೆ ಹೋಗಿ ವರದಿಯನ್ನು ನೀಡಿರುತ್ತೇನೆ. ಆ ಸಮಯದಲ್ಲಿ ಅವರು ಬಂದು ಸಿಲಿಂಡರ್‌ಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲುಃ ಮಾನ್ಯ ಸ.ಸ. ಅಭಿಯೋಜಕರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

**(ನನ್ನ ಉಕ್ತಲೇಖನ ರೀತ್ಯಾತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**C/C ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
**ದೊಡ್ಡಬಳ್ಳಾಪುರ .**